# ಕನ್ನಡ ರಾಜ್ಯೋತ್ಸವ 2019-20

“ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯ ಶಿವ”, ಎಷ್ಟೊಂದು ಸುಂದರ ಹಾಡು ಕೇಳಲು ಎಷ್ಟು ಇಂಪಾಗಿದೆ. ಅದಕ್ಕೆ ಅಲ್ಲವೇ ನಾವು ಕೂಡಾ ಆಚರಿಸುವುದು ಕನ್ನಡ ರಾಜ್ಯೋತ್ಸವ.

ಈ ಕನ್ನಡ ರಾಜ್ಯೋತ್ಸವವನ್ನು ನಮ್ಮ ಡೊನ್ ಬೊಸ್ಕೊ ಸಂಸ್ಥೆಯಲ್ಲಿ ಬಹು ವಿಜೃಂಭಣೆಯಿಂದ ಆಚರಿಸಲಾಯಿತು. ಅಂದಿನ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ವಕೀಲರು, ಲೇಖಕರು, ಬರಹಗಾರರಾದ ಕುಂದಾಪುರದ ಎ. ಎಸ್. ಎನ್. ಹೆಬ್ಬಾರ್‌ರವರು ಹಾಗೂ ನಮ್ಮ ಶಾಲೆಯ ಪ್ರಾಂಶುಪಾಲರಾದ ವಂದನೀಯ ಗುರುಗಳು ಫಾ॥ ಮ್ಯಾಕ್ಸಿಮ್ ಡಿಸೋಜಾ ಮತ್ತು ಆಡಳಿತ ನಿರ್ದೇಶಕರಾದ ವಂದನೀಯ ಗುರುಗಳು ಫಾ॥ ಆಯೋ ಪಿರೇರಾ, ಅಲ್ಲದೆ ರಕ್ಷಕ ಶಿಕ್ಷಕ ಸಭೆಯ ಕಾರ್ಯದರ್ಶಿಗಳಾದ ಶ್ರೀಮತಿ ಶಾಲೆಟ್ ಲೊಬೋ ಉಪಸ್ಥಿತರಿದ್ದರು.

ಅಂದು ಮೊದಲಿಗೆ ನೆರೆದಿರುವ ಎಲ್ಲಾ ಅತಿಥಿ ಗಣ್ಯರನ್ನು ವೇದಿಕೆಗೆ ಬರಮಾಡಿಕೊಳ್ಳಲಾಯಿತು. ನಂತರ ದೈವಿಕ ಜೀವನವನ್ನು ಬಲಗೊಳಿಸಲು ಪ್ರಾರ್ಥನಾ ಗೀತೆಯ ಮೂಲಕ ಕಾರ್ಯಕ್ರಮದ ಆರಂಭವನ್ನು ನಮ್ಮ ಶಾಲೆಯ ವಿದ್ಯಾರ್ಥಿಗಳು ನೆರವೇರಿಸಿದರು.

ತದನಂತರ ನಮ್ಮೆಲ್ಲ ಅತಿಥಿಗಣ್ಯರನ್ನು ತಮ್ಮ ಹಿತನುಡಿಯ ಮೂಲಕ ಶಿಕ್ಷಕಿ ಸುಲೇಖಾರವರು ಸ್ವಾಗತಿಸಿದರು.

ಚಿರಕಾಲ ಬೆಳಗಲಿ ಕನ್ನಡದ ದೀಪ, ಕನ್ನಡದ ಪ್ರಖರತೆಯನ್ನು ಜ್ಯೋತಿ ಬೆಳಗುವುದರೊಂದಿಗೆ ಪ್ರಾರಂಭಿಸೋಣ ಎಂದು ಅತಿಥಿ ಗಣ್ಯರು ವೇದಿಕೆಯಲ್ಲಿ ದೀಪ ಬೆಳಗಿಸಿದರು.

ಪ್ರತಿಯೊಬ್ಬ ವಿದ್ಯಾರ್ಥಿಯ ಸಾಧನೆ ಹಾಗೂ ಕಠಿಣ ಪರಿಶ್ರಮವನ್ನು ಗುರುತಿಸಿ ಸನ್ಮಾನಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಹೀಗಾಗಿ ವರ್ಷದಲ್ಲಿ ವಿವಿಧ ಚಟುವಟಿಕೆಗಳನ್ನೊಳಗೊಂಡ ಸಾಧನೆಗೈದ ವಿದ್ಯಾರ್ಥಿಗಳನ್ನು ಗುರುತಿಸಿ ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನು ವಿತರಿಸಿ ಪ್ರತಿಭಾ ಪುರಸ್ಕಾರನ್ನು ಮಾಡಲಾಯಿತು.

ನಾಡಿನ ವೈಶಿಷ್ಟವನ್ನು ಸಾರಲು ಕನ್ನಡಿಗರ ಅಭಿಮಾನವನ್ನು ವ್ಯಕ್ತಪಡಿಸಲು ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಪ್ರತಿಯೊಂದು ತರಗತಿಯ ವಿದ್ಯಾರ್ಥಿಗಳು ತಮ್ಮ ಕಲೆಯ ಪ್ರದರ್ಶನವನ್ನು ಅತಿ ಉತ್ಸಾಹದಿಂದ ನೆರವೇರಿಸಿದರು.

ನಂತರ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡ ನಮ್ಮ ಶಾಲೆಯ ಪ್ರಾಂಶುಪಾಲರಾದ ವಂದನೀಯ ಗುರುಗಳು ಫಾ। ಮ್ಯಾಕ್ಸಿಮ್ ಡಿಸೋಜಾರವರು ಕನ್ನಡ ರಾಜ್ಯೋತ್ಸವದ ಮಹತ್ವವನ್ನು ನಮ್ಮೊಂದಿಗೆ ಹಂಚಿಕೊಂಡರು.

ತದನಂತರ ಮುಖ್ಯ ಅತಿಥಿಗಳ ಕಿರುಪರಿಚಯವನ್ನು ತಮ್ಮ ಅಲಂಕಾರದ ಮಾತುಗಳಿಂದ ಶಿಕ್ಷಕಿ ಅನುಷಾರವರು ಮಾಡಿದರು.

ಅಂದು ಮುಖ್ಯ ಅತಿಥಿಗಳಾದ ಎ.ಎಸ್.ಎನ್. ಹೆಬ್ಬಾರ್ ರವರ ೮೦ನೇ ಹುಟ್ಟು ಹಬ್ಬವಿದ್ದು ಆ ಸಂಭ್ರಮವನ್ನು ವೇದಿಕೆಯಲ್ಲಿ ಎಲ್ಲರ ಮುಂದಾಳತ್ವದಲ್ಲಿ ಕೇಕನ್ನು ಕತ್ತರಿಸುವುದರ ಮೂಲಕ ಸಂಭ್ರಮದಿಂದ ಆಚರಿಸಲಾಯಿತು.

ನಂತರ ಮುಖ್ಯ ಅತಿಥಿಗಳಾದ ಎ.ಎಸ್.ಎನ್.ಹೆಬ್ಬಾರ್ ರವರು ಶಿಕ್ಷಣದ ಬಗ್ಗೆ, ಭಾಷೆಯ ಒಲವಿನ ಬಗ್ಗೆ ತಮ್ಮ ಮನದಾಳದ ಅನಿಸಿಕೆಯನ್ನು ನಮ್ಮೊಂದಿಗೆ ಹಂಚಿಕೊಂಡರು.

ಕಾರ್ಯಕ್ರಮದ ಕೊನೆಯ ಹಂತವಾದರೂ ಅತಿ ಮುಖ್ಯವಾದ ಧನ್ಯವಾದ ಸಮರ್ಪಣೆಯನ್ನು ನಮ್ಮ ಶಾಲೆಯ ಶಿಕ್ಷಕಿ ಸುಜಾತರವರು ನೆರವೇರಿಸಿಕೊಟ್ಟರು.

ಕೊನೆಯದಾಗಿ ರಾಷ್ಟ್ರಗೀತೆಯನ್ನು ಹೇಳುವುದರ ಮುಖಾಂತರ ಕನ್ನಡ ರಾಜ್ಯೋತ್ಸದ, ಸಂಭ್ರಮದ ಆಚರಣೆಗೆ ತೆರೆ ಬಿದ್ದಿತು.